ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-8 Issue-1, July-August 2026, Pp. 144-149
©*IIMRD*, Mysuru
IIMRD JOURNALS
www.iimrd.com

# ಬದಲಾಗುತ್ತಿರುವ ಗ್ರಾಮೀಣ ಆರ್ಥಿಕತೆ: ಒಂದು ಅಧ್ಯಯನ

**ಸೌಮ್ಯ ಜಿ. ಆರ್**
ಸಹ ಪ್ರಾಧ್ಯಾಪಕರು, ಅರ್ಥಶಾಸ್ತ್ರ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹರಿಹರ

**ಸಾರಾಂಶ: (Abstract)**

*ಗ್ರಾಮೀಣ ಆರ್ಥಿಕತೆ ಎಂದರೆ ಗ್ರಾಮೀಣ ಪ್ರದೇಶಗಳಲ್ಲಿ ನಡೆಯುತ್ತಿರುವ ಆರ್ಥಿಕ ಚಟುವಟಿಕೆಗಳು ಮತ್ತು ಆರ್ಥಿಕ ವ್ಯವಸ್ಥೆ. ಇದು ಮುಖ್ಯವಾಗಿ ಕೃಷಿ ಮತ್ತು ಕೃಷಿಗೆ ಸಂಬಂಧಿಸಿದ ಚಟುವಟಿಕೆಗಳ ಮೇಲೆ ಅವಲಂಬಿತವಾಗಿರುತ್ತದೆ. ಜೊತೆಗೆ ಸಣ್ಣ ಕೈಗಾರಿಕೆಗಳು, ಕರಕುಶಲ ವೃತ್ತಿಗಳು, ಪಶುಸಂಗೋಪನೆ, ಮೀನುಗಾರಿಕೆ, ಹೈನುಗಾರಿಕೆ, ಕೋಳಿ ಸಾಕಾಣಿಕೆ ಮುಂತಾದ ಎಲ್ಲವು ಗ್ರಾಮೀಣ ಆರ್ಥಿಕತೆಯ ಭಾಗಗಳಾಗಿವೆ ಎನ್ನಬಹುದು. ಅಲ್ಲದೆ ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುವ ಜನರು ತಮ್ಮ ಜೀವನೋಪಾಯವನ್ನು ಗಳಿಸಲು ನಡೆಸುವ ಆರ್ಥಿಕ ಚಟುವಟಿಕೆಗಳು ಮತ್ತು ಗ್ರಾಮೀಣ ಸಮುದಾಯದ ಅಭಿವೃದ್ಧಿಗೆ ನೀಡುವ ಕೊಡುಗೆಯನ್ನೂ ಗ್ರಾಮೀಣ ಆರ್ಥಿಕತೆ ಎನ್ನಬಹುದು. ಆದರೆ 21ನೇ ಶತಮಾನವು ತಾಂತ್ರಿಕ ಯುಗವಾಗಿದ್ದು ಪ್ರತಿಯೊಂದು ಕ್ಷೇತ್ರದಲ್ಲಿಯೂ ಬದಲಾವಣೆಗಳಾಗುತ್ತಿವೆ ಅದರಂತೆ ಗ್ರಾಮೀಣ ಕ್ಷೇತ್ರದಲ್ಲಿಯೂ ಬದಲಾವಣೆಗಳಾಗುತ್ತಿದೆ. ಗ್ರಾಮೀಣ ಜನರ ಆರ್ಥಿಕ ಸ್ಥಿತಿ, ಉದ್ಯೋಗ, ಆದಾಯ ಮತ್ತು ಜೀವನೋಪಾಯದ ಮಾದರಿಗಳಲ್ಲಿ ಬದಲಾವಣೆಗಳಾಗುತ್ತಿವೆ. ಪ್ರಸ್ತುತ ಅಧ್ಯಯನವು ಗ್ರಾಮೀಣ ಆರ್ಥಿಕತೆಯಲ್ಲಿ ಆಗುತ್ತಿರುವ ಬದಲಾವಣೆಗಳನ್ನು ತಿಳಿಯುವುದಾಗಿದೆ. ಈ ಅಧ್ಯಯನಕ್ಕೆ ಪೂರಕವಾಗಿ ಚಿತ್ರದುರ್ಗ ತಾಲೂಕಿನ ಮೆದೆಹಳ್ಳಿ ಗ್ರಾಮದ ಜನರನ್ನು ಸಮಗ್ರವಾಗಿ ಆಯ್ಕೆಮಾಡಿಕೊಂಡು ಮಾಹಿತಿಯನ್ನು ಸಂಗ್ರಹಿಸಲಾಗಿದೆ ಪ್ರಸ್ತುತ ಅಧ್ಯಯನವು ಗ್ರಾಮೀಣ ಆರ್ಥಿಕತೆಯಲ್ಲಿ ಆಗುತ್ತಿರುವ ಬದಲಾವಣೆಗಳ ಮೇಲೆ ಬೆಳಕು ಚಲ್ಲುತ್ತದೆ.*

**ಮುಖ್ಯಪದಗಳು (Keywords):** *ಗ್ರಾಮೀಣ ಆರ್ಥಿಕತೆ, ಕೃಷಿ, ಕೃಷಿ ಕೂಲಿ, ಪಶುಸಂಗೋಪನೆ, ಯಾಂತ್ರೀಕರಣ, ಸಣ್ಣ ಕೈಗಾರಿಕೆಗಳು.*

## ಪೀಠಿಕೆ

ಗ್ರಾಮೀಣ ಆರ್ಥಿಕತೆಯು ಮುಖ್ಯವಾಗಿ ಕೃಷಿ ಆಧಾರಿತ ಆರ್ಥಿಕತೆಯಾಗಿದೆ. ವಿಜ್ಞಾನ ತಂತ್ರಜ್ಞಾನದ ಕ್ಷೇತ್ರದಲ್ಲಾಗುತ್ತಿರುವ ಕ್ರಾಂತಿಕಾರಕ ಬದಲಾವಣೆಗಳಿಂದಾಗಿ ಇಡೀ ಜಗತ್ತೇ ಬದಲಾಗುತ್ತಿದೆ. ಇದರ ಪ್ರಭಾವ ಗ್ರಾಮಿಣ ಜೀವನ ಮತ್ತು ಗ್ರಾಮೀಣ ಆರ್ಥಿಕತೆಯ ಮೇಲೂ ಆಗುತ್ತಿದ್ದು ಯಂತ್ರೋಪಕರಣಗಳು ಮತ್ತು ಆಧುನಿಕ ತಂತ್ರಜ್ಞಾನವು ಸಾಂಪ್ರದಾಯಿಕ ಕೃಷಿ ಪದ್ಧತಿಯನ್ನು ಬದಲಾಯಿಸಿದೆ. ಗುಡಿ ಕೈಗಾರಿಕೆಗಳು, ಕರಕುಶಲ ಮತ್ತು ಸಣ್ಣ ಕೈಗಾರಿಕೆಗಳು ಬೆಳೆಯುತ್ತಿವೆ. ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿಯಿಂದ ಹೊಸ ಹೊಸ

***Please cite this article as:*** ಸೌಮ್ಯ, ಜಿ.ಆರ್. (2026). ಬದಲಾಗುತ್ತಿರುವ ಗ್ರಾಮೀಣ ಆರ್ಥಿಕತೆ : ಒಂದು ಅಧ್ಯಯನ. *ಪ್ರತಿಬಿಂಬ: ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 8(1). ಪು.ಸಂ.* 144–149

ಉದ್ಯೋಗವಕಾಶಗಳು ಸೃಷ್ಟಿಯಾಗುತ್ತಿವೆ. ಉತ್ತಮ ಉದ್ಯೋಗಕ್ಕಾಗಿ ಅನೇಕ ಗ್ರಾಮೀಣ ಜನರು ನಗರಗಳಿಗೆ ವಲಸೆ ಹೋಗುತ್ತಿದ್ದಾರೆ. ಮೊಬೈಲ್, ಇಂಟರ್ನೆಟ್, ಆನ್‌ಲೈನ್ ಬ್ಯಾಂಕಿಂಗ್ ಮತ್ತು ಡಿಜಿಟಲ್ ಪಾವತಿಗಳು ಗ್ರಾಮೀಣ ಚಟುವಟಿಕೆಗಳನ್ನು ಬದಲಾಯಿಸುತ್ತಿವೆ. ಈ ಎಲ್ಲಾ ಅಂಶಗಳು ಗ್ರಾಮೀಣ ಆರ್ಥಿಕತೆಯ ಮೇಲೆ ಪರಿಣಾಮ ಬೀರುತ್ತಿವೆ.

**ಕೃಷಿಯ ಯಾಂತ್ರೀಕರಣ**

ಕೃಷಿಯ ಯಾಂತ್ರೀಕರಣ ಎಂದರೆ ಕೃಷಿ ಚಟುವಟಿಕೆಗಳಲ್ಲಿ ಮಾನವ ಮತ್ತು ಪ್ರಾಣಿಗಳ ಶ್ರಮದ ಮೇಲಿನ ಅವಲಂಬನೆಯನ್ನು ಕಡಿಮೆಮಾಡಿ ಯಂತ್ರೋಪಕರಣಗಳು, ಸಾಧನಗಳು ಮತ್ತು ಆಧುನಿಕ ತಂತ್ರಜ್ಞಾನವನ್ನು ಬಳಸುವುದು. ಕೃಷಿಯನ್ನು ವೇಗವಾಗಿ, ಸುಲಭವಾಗಿ ಮತ್ತು ಹೆಚ್ಚು ಉತ್ಪಾದಕವನ್ನಾಗಿಸಲು ಯಂತ್ರಗಳು ಹಾಗೂ ಆಧುನಿಕ ತಂತ್ರಜ್ಞಾನವನ್ನು ಬಳಸುವುದು. ಉಳುಮೆ ಮತ್ತು ಸಾಗಾಣಿಕೆಗೆ ಟ್ರ್ಯಾಕ್ಟರ್, ಬೀಜ ಬಿತ್ತಲು ಬಿತ್ತನೆ ಯಂತ್ರ, ಬೆಳೆ ಕೊಯ್ಯಲು ಕೊಯ್ಲು ಯಂತ್ರ, ನೀರು ಹಾಯಿಸಲು ನೀರಾವರಿ ಪಂಪ್, ಧಾನ್ಯಗಳನ್ನು ಬೇರ್ಪಡಿಸಲು ಒಕ್ಕಣೆ ಯಂತ್ರ ಮುಂತಾದ ಯಂತ್ರಗಳನ್ನು ಕೃಷಿಯಲ್ಲಿ ಬಳಸಲಾಗುತ್ತಿದೆ ಇದರಿಂದ ಮಾನವ ಶ್ರಮದ ಮೇಲಿನ ಅವಲಂಬನೆ ಕಡಿಮೆಯಾಗುತ್ತಿದ್ದು ಹೆಚ್ಚಿನ ಪ್ರದೇಶದಲ್ಲಿ ಕೃಷಿ ಮಾಡಲು ಸಹಾಯವಾಗುವುದರ ಜೊತೆಗೆ ಕೃಷಿ ಉತ್ಪಾದಕತೆಯನ್ನೂ ಹೆಚ್ಚಿಸಿದೆ.

**ವೃತ್ತಿಗಳ ವೈವಿಧ್ಯೀಕರಣ**

ಜನರು ಕೃಷಿಯ ಮೇಲೆ ಮಾತ್ರ ಆವಲಂಬಿತವಾಗಿರದೆ, ಬೇರೆಬೇರೆ ವೃತ್ತಿಗಳು, ಉದ್ಯೋಗಗಳು ಮತ್ತು ವ್ಯವಹಾರಗಳಿಗೆ ತಮ್ಮನ್ನು ಅಳವಡಿಸಿಕೊಳ್ಳುವುದನ್ನು ವೃತ್ತಿಗಳ ವೈವಿಧ್ಯೀಕರಣ ಎನ್ನುತ್ತೇವೆ. ಜನರು ಕೃಷಿಯ ಜೊತೆಗೆ, ವ್ಯಾಪಾರ, ಸೇವಾಕ್ಷೇತ್ರ, ಕಟ್ಟಡ ನಿರ್ಮಾನ ಮತ್ತು ಸಣ್ಣ ಉದ್ಯಮಗಳತ್ತ ಸಾಗುತ್ತಿದ್ದಾರೆ. ಮೊಬೈಲ್, ಇಂಟರ್ನೆಟ್, ಆನ್‌ಲೈನ್ ಬ್ಯಾಂಕಿಂಗ್ ಮತ್ತು ಡಿಜಿಟಲ್ ಪಾವತಿಗಳು ಗ್ರಾಮೀಣ ಚಟುವಟಿಕೆಗಳನ್ನು ಬದಲಾಯಿಸುತ್ತಿವೆ. ಆದಾಯದ ಹೆಚ್ಚಳ ಮತ್ತು ಉತ್ತಮ ಸಂಪರ್ಕ ವ್ಯವಸ್ಥೆಯಿಂದ ಗ್ರಾಮೀಣ ಜನರ ಆಥಿಕತೆಯಲ್ಲಿ ಮತ್ತು ವೃತ್ತಿಗಳಲ್ಲಿ ಬದಲಾವಣೆಗಳಾಗುತ್ತಿವೆ.

**ಅಧ್ಯಯನದ ಉದ್ದೇಶಗಳು**

- ಗ್ರಾಮೀಣ ಜನರ ಆರ್ಥಿಕ ಸ್ಥಿತಿಗತಿಗಳನ್ನು ತಿಳಿಯುವುದು.
- ಗ್ರಾಮೀಣ ಉದ್ಯೋಗಗಳಲ್ಲಾಗುತ್ತಿರುವ ಬದಲಾವಣೆಗಳನ್ನು ತಿಳಿಯುವುದು.
- ಗ್ರಾಮೀಣ ಜನರ ಮೇಲಾಗುತ್ತಿರುವ ತಂತ್ರಜ್ಞಾನದ ಪ್ರಭಾವವನ್ನು ತಿಳಿಯುವುದು.

**ಅಧ್ಯಯನದ ಮಹತ್ವ**

- ಗ್ರಾಮೀಣ ಜನರ ಸಾಮಾಜಿಕ ಆರ್ಥಿಕ ಸ್ಥಿತಿಯನ್ನು ಸುಧಾರಿಸುತ್ತದೆ.
- ಗ್ರಾಮೀಣ ಸಮಗ್ರ ಅಭಿವೃದ್ಧಿಯನ್ನು ಪ್ರೋತ್ಸಾಹಿಸುತ್ತದೆ.

**ಸಂಶೋಧನಾ ವಿಧಾನ ಮತ್ತು ತಂತ್ರಗಳು**

ಪ್ರಸ್ತುತ ಅಧ್ಯಯನದಲ್ಲಿ ಮಾಹಿತಿ/ದತ್ತಾಂಶ ಸಂಗ್ರಹಣೆಗಾಗಿ ವೈಜ್ಞಾನಿಕ ತಂತ್ರಸಾಧನಗಳನ್ನು ಬಳಸಿಕೊಂಡು ಪ್ರಾಥಮಿಕ ಮತ್ತು ಮಾಧ್ಯಮಿಕ ಮೂಲಗಳೆರಡರಿಂದಲೂ ಮಾಹಿತಿ ಸಂಗ್ರಹಿಸಲಾಗಿದೆ. ಕ್ಷೇತ್ರಾಧ್ಯಯನ ಕಾರ್ಯವನ್ನು ಕೈಗೊಂಡು ಸಂಶೋಧನೆಗೆ ಅಗತ್ಯವಿರುವ ಮಾಹಿತಿಯನ್ನು ಸಂದರ್ಶನ ಅನುಸೂಚಿಯನ್ನು ಬಳಸಿಕೊಂಡು ಸಂದರ್ಶಿತರನ್ನು ನೇರವಾಗಿ ಭೇಟಿಮಾಡಿ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

**ಅಧ್ಯಯನ ಕಾರ್ಯಕ್ಷೇತ್ರ ಮತ್ತು ಜನಸಂಖ್ಯಾ ಮಾದರಿಯ ಆಯ್ಕೆ**

ಪ್ರಸ್ತುತ ಅಧ್ಯಯನವು ಬದಲಾಗುತ್ತಿರುವ ಗ್ರಾಮೀಣ ಆರ್ಥಿಕತೆಯನ್ನು ತಿಳಿಯುವುದಾಗಿದೆ. ಈ ಒಂದು ಅಧ್ಯಯನ ಚಿತ್ರದುರ್ಗ ತಾಲ್ಲೂಕಿನ ಮೆದೆಹಳ್ಳಿ ಗ್ರಾಮಕ್ಕೆ ಸಂಬಂಧಿಸಿದಂತೆ ಎಂಬ ವಿಷಯಕ್ಕೆ ಮೆದೆಹಳ್ಳಿ ಗ್ರಾಮಕ್ಕೆ ಸೀಮಿತಗೊಳಿಸಿ 50 ಜನ ಸದಸ್ಯರನ್ನು ಸರಳಯಾದೃಚ್ಛಿಕ ಮಾದರಿ ವಿಧಾನದ ಮೂಲಕ ಆಯ್ಕೆಮಾಡಿಕೊಂಡು ಅಗತ್ಯ ಸಂಶೋಧನಾ ತಂತ್ರ ಹಾಗೂ ವಿಧಾನಗಳ ಮೂಲಕ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

**ಮಾಹಿತಿ ಸಂಗ್ರಹಣೆ:**

ಪ್ರಸ್ತುತ ಸಂಶೋಧನಾ ಅಧ್ಯಯನಕ್ಕೆ ವಿವಿಧ ಮೂಲಗಳಿಂದ ಮಾಹಿತಿಯನ್ನು ಸಂಗ್ರಹಣೆಮಾಡುವುದು ಸೂಕ್ತವಾಗಿದೆ. ಮಾಹಿತಿ ಸಂಗ್ರಹಣೆಯಲ್ಲಿ ಪ್ರಾಥಮಿಕ ಮತ್ತು ಮಾಧ್ಯಮಿಕ/ಅನುಷಂಗಿಕ ಮೂಲಗಳು ಮಹತ್ವದ ಪಾತ್ರವನ್ನು ನಿರ್ವಹಿಸುತ್ತವೆ. ಪ್ರಾಥಮಿಕ ಮೂಲಗಳು ಅಧ್ಯಯನ ಕ್ಷೇತ್ರದಿಂದ ನೇರವಾಗಿ ಮಾಹಿತಿಯನ್ನು ಸಂಗ್ರಹಿಸುವುದಾಗಿದೆ. ಮಾಹಿತಿ ಸಂಗ್ರಹಣೆಯ ಮೂಲಗಳಲ್ಲಿ ಪ್ರಮುಖವಾಗಿ ಎರಡು ಪ್ರಕಾರಗಳಿವೆ. ಅವುಗಳೆಂದರೆ.

**ಪ್ರಾಥಮಿಕ ಮಾಹಿತಿ:** ಸಂಶೋಧನಾ ಅನುಸೂಚಿಯನ್ನು ಬಳಸಿಕೊಂಡು ಮಾಹಿತಿಯನ್ನು ಸಂಗ್ರಹಿಸಲು ಸಂಶೋಧಕರು ಕಾರ್ಯಪ್ರವೃತ್ತರಾಗಿದ್ದು, ವಾಸ್ತವಿಕ ಕ್ಷೇತ್ರದಿಂದ ತಾವೇ ನೇರವಾಗಿ ಮಾಹಿತಿದಾರರನ್ನು ಭೇಟಿಮಾಡಿ, ಅವಲೋಕಿಸಿ, ಸಂದರ್ಶನಕ್ಕೆ ಒಳಪಡಿಸಿ ಟಿಪ್ಪಣಿ ಮಾಡಿಕೊಳ್ಳುವುದರ ಮೂಲಕ ಮಾಹಿತಿಯನ್ನು ಸಂಗ್ರಹಿಸಲಾಗಿದೆ

**ಅನುಷಂಗಿಕ/ಮಾಧ್ಯಮಿಕ ಮಾಹಿತಿ:** ಪ್ರಸ್ತುತ ಅಧ್ಯಯನಕ್ಕೆ ಅಗತ್ಯವಾದ ಮಾಧ್ಯಮಿಕ ಮಾಹಿತಿಯನ್ನು ಪುಸ್ತಕಗಳು, ಗ್ರಂಥಗಳು, ಪತ್ರಿಕೆಗಳು, ಅಂತರ್ಜಾಲ, ಸರ್ಕಾರಿ ಇಲಾಖಾ ದಾಖಲಾತಿಗಳು, ಜನಗಣತಿ ದಾಖಲಾತಿಗಳು, ಸಮೀಕ್ಷಾ ವರದಿಗಳು. ಮಹಾಪ್ರಬಂಧಗಳು ಇನ್ನು ಮುಂತಾದವುಗಳಿಂದ ಅಧ್ಯಯನಕ್ಕೆ ಬೇಕಾದ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

## ಮಾಹಿತಿಯ ವಿಶ್ಲೇಷಣೆ

**ಕೋಷ್ಟಕ–1 ಮಾಹಿತಿದಾರರ ವಯೋಮಾನಕ್ಕೆ ಸಂಬಂಧಿಸಿದ ವಿವರ**

| **ವಯೋಮಾನ (ವರ್ಷ)** | **ಆವೃತ್ತಿ** | **ಶೇಕಡವಾರು** |
|---|---|---|
| 20–30 | 10 | 20% |
| 30–40 | 20 | 40% |
| 40–50 | 15 | 30% |
| 50ವರ್ಷಕ್ಕಿಂತ ಹೆಚ್ಚು | 05 | 10% |
| **ಒಟ್ಟು** | **50** | **100%** |

ಮೇಲ್ಕಂಡ ಕೋಷ್ಟಕದಲ್ಲಿ ಮಾಹಿತಿದಾರರ ವಯೋಮಾನದ ವಿವರಗಳನ್ನು ನೀಡಲಾಗಿದೆ. ಒಟ್ಟು ಸಂದರ್ಶಿತರಲ್ಲಿ, ಶೇಕಡ 20ರಷ್ಟು 20ರಿಂದ 30 ವರ್ಷ ವಯಸ್ಸಿನವರು, ಶೇಕಡ 40ರಷ್ಟು 30ರಿಂದ 40 ವರ್ಷ ವಯಸ್ಸಿನವರು, ಶೇಕಡ 30ರಷ್ಟು 40ರಿಂದ 50 ವರ್ಷ ವಯಸ್ಸಿನವರು, ಶೇಕಡ 10ರಷ್ಟು 50 ವರ್ಷಕ್ಕಿಂತ ಹೆಚ್ಚಿನ ವಯಸ್ಸಿನವರು ಕಂಡು ಬಂದಿದ್ದಾರೆ. ಕಾರಣ 30ರಿಂದ 50 ವರ್ಷ ವಯಸ್ಸಿನವರಲ್ಲಿ ದುಡಿಯುವವರು ಹೆಚ್ಚಿರುತ್ತಾರೆ. ಹಾಗಾಗಿ 30ರಿಂದ 50 ವರ್ಷ ವಯಸ್ಸಿನವರು ಶೇಕಡ 70ರಷ್ಟು ಕಂಡು ಬಂದಿದ್ದಾರೆ.

**ಕೋಷ್ಟಕ–2 ಮಾಹಿತಿದಾರರ ಶೈಕ್ಷಣಿಕ ಮಟ್ಟದ ವಿವರ**

| **ಶೈಕ್ಷಣಿಕ ಮಟ್ಟ** | **ಆವೃತ್ತಿ** | **ಶೇಕಡವಾರು** |
|---|---|---|
| ಪ್ರಾಥಮಿಕ ಶಿಕ್ಷಣ | 10 | 20% |
| ಪ್ರೌಢ ಶಿಕ್ಷಣ | 20 | 40% |
| ಪದವಿ ಪೂರ್ವ ಶಿಕ್ಷಣ | 15 | 30% |
| ಪದವಿ ಶಿಕ್ಷಣ | 05 | 10% |
| **ಒಟ್ಟು** | **50** | **100%** |

ಮೇಲ್ಕಂಡ ಕೋಷ್ಟಕದಲ್ಲಿ ಮಾಹಿತಿದಾರರ ಶೈಕ್ಷಣಿಕ ಮಟ್ಟದ ವಿವರಗಳನ್ನು ತಿಳಿಸಲಾಗಿದ್ದು, ಒಟ್ಟು ಮಾಹಿತಿದಾರರಲ್ಲಿ ಶೇಕಡ 20ರಷ್ಟು ಪ್ರಾಥಮಿಕ ಶಿಕ್ಷಣವನ್ನು ಪಡೆದವರು, ಶೇಕಡ 40ರಷ್ಟು ಪ್ರೌಢ ಶಿಕ್ಷಣವನ್ನು ಪಡೆದವರು, ಶೇಕಡ 30ರಷ್ಟು ಪದವಿ ಪೂರ್ವ ಶಿಕ್ಷಣವನ್ನು ಪಡೆದವರು, ಶೇಕಡ 10ರಷ್ಟು ಪದವಿ ಪೂರ್ವ ಶಿಕ್ಷಣವನ್ನು ಪಡೆದವರು, ಶೇಕಡ 10ರಷ್ಟು ಪದವಿ ಶಿಕ್ಷಣವನ್ನು ಪಡೆದವರು ಕಂಡುಬಂದಿದ್ದಾರೆ.

**ಕೋಷ್ಟಕ–3 ಮಾಹಿತಿದಾರರ ಆರ್ಥಿಕ ಸ್ಥಿತಿಗೆ (ಉದ್ಯೋಗದ) ಸಂಬಂಧಿಸಿದ ವಿವರ**

| **ಶೈಕ್ಷಣಿಕ ಮಟ್ಟ** | **ಆವೃತ್ತಿ** | **ಶೇಕಡವಾರು** |
|---|---|---|
| ಕೃಷಿ | 10 | 20% |
| ಕೃಷಿ ಅವಲಂಬತ ಉದ್ಯೋಗ | 10 | 20% |
| ಸ್ವ ಉದ್ಯೋಗ | 15 | 30% |
| ಸಣ್ಣ ವ್ಯಾಪಾರ | 15 | 30% |
| **ಒಟ್ಟು** | **50** | **100%** |

ಈ ಮೇಲಿನ ಕೋಷ್ಟಕದಲ್ಲಿ ಮಾಹಿತಿದಾರರ ಉದ್ಯೋಗದ ಸ್ಥಿತಿಗತಿಗೆ ಸಂಬಂಧಿಸಿದ ವಿವರಗಳನ್ನು ತಿಳಿಸಲಾಗಿದ್ದು. ಶೇಕಡ 20ರಷ್ಟು ಮಾಹಿತಿದಾರರು ಕೃಷಿಯನ್ನು ಮಾಡುವುದಾಗಿಯೂ, ಶೇಕಡ 20ರಷ್ಟು ಮಾಹಿತಿದಾರರು ಕೃಷಿ ಅವಲಂಬಿತ ಉದ್ಯೋಗಗಳಾದ ಹೈನುಗಾರಿಕೆ, ಕೋಳಿಸಾಕಾಣಿಕೆ, ಕುರಿ ಸಾಕಾಣಿಕೆ ಮಾಡುವುದಾಗಿಯೂ ತಿಳಿಸಿರುತ್ತಾರೆ. ಶೇಕಡ 30ರಷ್ಟು ಮಾಹಿತಿದಾರರು ಸ್ವ–ಉದೋಗ ಮಾಡುವುದಾಗಿಯೂ ಮತ್ತು ಶೇಕಡ 30ರಷ್ಟು ಮಾಹಿತಿದಾರರು ಸಣ್ಣ–ವ್ಯಾಪಾರ ಮಾಡುವುದಾಗಿಯೂ ತಿಳಿಸಿರುತ್ತಾರೆ. ಇತ್ತೀಚಿನ ದಿನಗಳಲ್ಲಿ ಕೃಷಿಯ ಮೇಲಿನ ಅವಲಂಬನೆ ಕಡಿಮೆ ಯಾಗುತ್ತಿದೆ.

**ಕೋಷ್ಟಕ–4 ಗ್ರಾಮೀಣ ಆರ್ಥಿಕತೆಯ ಮೇಲೆ ತಂತ್ರಜ್ಞಾನದ ಪ್ರಭಾವಕ್ಕೆ ಸಂಬಂಧಿಸಿದ ವಿವರ**

| **ಶೈಕ್ಷಣಿಕ ಮಟ್ಟ** | **ಆವೃತ್ತಿ** | **ಶೇಕಡವಾರು** |
|---|---|---|
| ಕೃಷಿಯಲ್ಲಿ ಸುಧಾರಣೆ | 10 | 20% |
| ಉದ್ಯೋಗ ಅವಕಾಶಗಳು | 20 | 40% |
| ಡಿಜಿಟಲ್ ಬ್ಯಾಂಕಿಂಗ್ | 10 | 20% |
| ಮಾರುಕಟ್ಟೆಯ ಪ್ರವೇಶ | 10 | 20% |
| **ಒಟ್ಟು** | **50** | **100%** |

ಈ ಮೇಲಿನ ಕೋಷ್ಟಕದಲ್ಲಿ ಗ್ರಾಮೀಣ ಆರ್ಥಿಕತೆಯ ಮೇಲೆ ತಂತ್ರಜ್ಞಾನದ ಪ್ರಭಾವಕ್ಕೆ ಸಂಬಂಧಿಸಿದ ವಿವರಗಳನ್ನು ತಿಳಿಸಲಾಗಿದ್ದು. ಶೇಕಡ 20ರಷ್ಟು ಮಾಹಿತಿದಾರರು ಕೃಷಿಯಲ್ಲಿ ಸುಧಾರಣೆ ಯಾಗಿರುವುದಾಗಿಯೂ, ಶೇಕಡ 40ರಷ್ಟು ಮಾಹಿತಿದಾರರು ಉದ್ಯೋಗ ಅವಕಾಶಗಳು ಹೆಚ್ಚಾಗಿರುವುದಾಗಿಯೂ ತಿಳಿಸಿರುತ್ತಾರೆ. ಶೇಕಡ 20ರಷ್ಟು ಮಾಹಿತಿದಾರರು ಡಿಜಿಟಲ್ ಬ್ಯಾಂಕಿಂಗ್ ಸೌಲಭ್ಯಗಳು ದೊರೆತಿರುವುದಾಗಿಯೂ, ಶೇಕಡ 20ರಷ್ಟು ಮಾಹಿತಿದಾರರು ಮಾರುಕಟ್ಟೆಯ ಸೌಲಭ್ಯಗಳು ದೊರೆತಿರುವುದಾಗಿ ತಿಳಿಸಿರುತ್ತಾರೆ. ಇದಕ್ಕೆ ಮುಖ್ಯವಾದ ಕಾರಣ ತಂತ್ರಜ್ಞಾನವಾಗಿದೆ.

**ಉಪಸಂಹಾರ ಮತ್ತು ಸಲಹೆಗಳು**

ಗ್ರಾಮೀಣ ಆರ್ಥಿಕತೆಯು ಮುಖ್ಯವಾಗಿ ಕೃಷಿ ಆಧಾರಿತ ಆರ್ಥಿಕತೆಯಿಂದ ವೈವಿಧ್ಯಮಯ ಆರ್ಥಿಕತೆಯಾಗಿ ಬದಲಾಗುತ್ತಿದೆ. ಆಧುನಿಕ ತಂತ್ರಜ್ಞಾನ, ಕೃಷಿಯ ಯಾಂತ್ರೀಕರಣ, ಶಿಕ್ಷಣ, ಉತ್ತಮ

ಸಾರಿಗೆ, ಡಿಜಿಟಲ್ ಸಂಪರ್ಕ ಮತ್ತು ಸರ್ಕಾರಿ ಯೋಜನೆಗಳು, ಗ್ರಾಮೀಣ ಜನರಿಗೆ ಹೊಸ ಅವಕಾಶಗಳನ್ನು ಸೃಷ್ಟಿಸಿವೆ. ವ್ಯಾಪಾರ, ಕಟ್ಟಡ ನಿರ್ಮಾಣ, ಸಣ್ಣ ಕೈಗಾರಿಕೆಗಳು, ಸಾರಿಗೆ ಮತ್ತು ಸೇವಾ ಕ್ಷೇತ್ರಗಳಂತಹ ಕೃಷಿಯೇತರ ಉದ್ಯೋಗಗಳು ಹೆಚ್ಚಾಗಿವೆ, ಆರ್ಥಿಕ ಚಟುವಟಿಕೆಗಳಲ್ಲಿ ಮಹಿಳೆಯರ ಭಾಗವಹಿಸುವಿಕೆಯೂ ಹೆಚ್ಚಾಗಿದೆ. ಆದರೂ ಗ್ರಾಮೀಣ ಪ್ರದೇಶಗಳಲ್ಲಿ ಬಡತನ ನಿರುದ್ಯೋಗ, ಋತುಮಾನಿಕ ಉದ್ಯೋಗ, ವಲಸೆ ಮತ್ತು ಆರ್ಥಿಕ ಅಸಮಾನತೆ ಮುಂತಾದ ಸಮಸ್ಯೆಗಳು ಇನ್ನೂ ಇವೆ.

**ಸಂಶೋಧನೆಯಿಂದ ವ್ಯಕ್ತವಾದ ಅಂಶಗಳು**

- ಕೃಷಿಯ ಮೇಲಿನ ಅವಲಂಬನೆ ಕಡಿಮೆಯಾಗಿದೆ.
- ಕೃಷಿಯಲ್ಲಿ ಯಾಂತ್ರೀಕರಣ ಹೆಚ್ಚಾಗಿದೆ
- ಕೃಷಿಯೇತರ ಉದ್ಯೋಗಗಳ ಬೆಳವಣಿಗೆ ಹೆಚ್ಚಾಗಿದೆ
- ಗ್ರಾಮೀಣ ಪ್ರದೇಶಗಳಿಂದ ನಗರ ಪ್ರದೇಶಗಳಿಗೆ ವಲಸೆ ಹೆಚ್ಚಾಗಿದೆ.
- ಆದಾಯದ ಮೂಲಗಳಲ್ಲಿ ಬದಲಾವಣೆಯಾಗಿ ಜೀವನ ಮಟ್ಟದಲ್ಲಿ ಸುಧಾರಣೆಯಾಗಿದೆ.

**ಸಲಹೆಗಳು**

- ಕೃಷಿ ಅಭಿವೃದ್ಧಿಗೆ ಉತ್ತೇಜನ ನೀಡಬೇಕಾಗಿದೆ
- ಕೃಷಿಯೇತರ ಉದ್ಯೋಗಗಳನ್ನು ಹೆಚ್ಚಿಸುವುದು.
- ಸಾಲ ಸೌಲಭ್ಯ ಅಥವಾ ಬ್ಯಾಂಕ್ ಸೌಲಭ್ಯಗಳ ವಿಸ್ತರಣೆ
- ಮಹಿಳೆಯರ ಆರ್ಥಿಕ ಭಾಗವಹಿಸುವಿಕೆಗೆ ಪ್ರೋತ್ಸಾಹ
- ಉತ್ತಮ ಮಾರ್ಗದರ್ಶನ ನೀಡಬೇಕಾಗಿದೆ

**ಪರಾಮರ್ಶನ ಗ್ರಂಥಗಳು**


- ಸೋಮಶೇಖರ್ ಎಸ್. ಟಿ. (2022). ಗ್ರಾಮೀಣ ಅಭಿವೃದ್ಧಿ, ಸಿದ್ದಲಿಂಗೇಶ್ವರ ಪ್ರಕಾಶನ
- ಕೃಷ್ಣಯ್ಯಗೌಡ, ಎಚ್. ಆರ್. (2022). ಗ್ರಾಮೀಣ ಅಭಿವೃದ್ಧಿ, ವಿದ್ಯಾನಿಧಿ ಪ್ರಕಾಶನ.
- ಕೃಷ್ಣಯ್ಯಗೌಡ, ಎಚ್. ಆರ್. (2022). ಗ್ರಾಮೀಣ ಅರ್ಥಶಾಸ್ತ್ರ. ವಿದ್ಯಾನಿಧಿ ಪ್ರಕಾಶನ.
- ಕೃಷ್ಣಯ್ಯಗೌಡ, ಎಚ್. ಆರ್. (2025). ಕೃಷಿ ಅರ್ಥಶಾಸ್ತ್ರ ವಿದ್ಯಾನಿಧಿ ಪ್ರಕಾಶನ.
- ರಾಮ್ ಅಹುಜಾ (2018) ರೀಸಚ್ ಮೆಥಡ್ಸ್ , ರಾವತ್ ಪಬ್ಲಿಕೇಷನ್ಸ್, ನ್ಯೂದೆಹಲಿ.
- ಲಾಲ್ ದಾಸ್, ಡಿ.ಕೆ. (2014). ಪ್ರಾಕ್ಟೀಸ್ ಆಫ್ ಸೋಶಿಯಲ್ ರೀಸರ್ಚ್. ರಾವತ್ ಪಬ್ಲಿಕೇಷನ್ಸ್.